ರೂಪಾಯಿಗಳು ಬೇಕಾಗುತ್ತದೆ. ಇದಕ್ಕೆ ಒಂದು ಯೋಜನೆಯನ್ನು ತಯಾರು ಮಾಡ ಬೇಕೆಂದಿದ್ದೇವೆ. ಯು.ಜಿ.ಸಿ.ಯಿಂದ ನೆರವು ತೆಗೆದುಕೊಳ್ಳಲು ಅವಕಾಶ ಇದ್ದರೆ ಅದನ್ನು ತೆಗೆದುಕೊಳ್ಳುತ್ತೇವೆ. ಇಲ್ಲವೇ ಬೇರೆ ಯಾವುದಾದರೂ ಒಂದು ರೂಪದಲ್ಲಿ ನೆರವನ್ನು ಪಡೆದು ಒಂದೆರಡು ವರ್ಷಗಳಲ್ಲಿಯೇ ನಮ್ಮ ರಾಜ್ಯದಲ್ಲಿರತಕ್ಕ ಕಾಲೇಜು ಕಟ್ಟಡ ಕೊರತೆಯನ್ನು ನೀಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈಗಿರತಕ್ಕ ಹಣದಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಿ ಆ ಕಟ್ಟಡಕ್ಕೆ ಎಷ್ಟು ಹಣವನ್ನು ಕೊಡಲಿಕ್ಕೆ ಸಾಧ್ಯವಾಗುತ್ತ ದೆಯೋ ಅಷ್ಟು ಹಣವನ್ನು ನಾನು ಬಿಡುಗಡೆ ಮಾಡುತ್ತೇನೆ.

ಶ್ರೀ ಗಂಗಾಧರನಾಯಕ್ :- ಮಾನ್ಯ ಅಧ್ಯಕ್ಷರೇ, ಈ ಕಟ್ಟಡ ಕೆಳಗಿನ ಫಸ್ಟ್ ಫ್ಲೋರ್ ಈಗಾಗಲೇ ತರಗತಿಗಳು ನಡೆಸಲು ಉತ್ತಮವಾಗಿದೆ. ಅಲ್ಲಿ ಫಸ್ಟ್ ಫ್ಲೋರ್‌ನಲ್ಲಿ ಸಹ ತರಗತಿಗಳನ್ನು ನಡೆಸತಕ್ಕದ್ದು ಯೋಗ್ಯವಾಗಿದೆ. ಆದಕಾರಣ ತಾವು ಅಲ್ಲಿ ಆದಷ್ಟು ಬೇಗನೆ ಕೆಳಗಡೆ ಕ್ಲಾಸ್‌ಗಳನ್ನು ನಡೆಸಬೇಕು ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತೇನೆ.

ಶ್ರೀ ಬಿ. ಸೋಮಶೇಖರ್ :- ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ವಿಷಯ :- ಬೇಲೂರು ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು ಮತ್ತ ಹೆಚ್ಚುವರಿ ಆರೋಗ್ಯ ಘಟಕಗಳ ಸ್ಥಾಪನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 262 (1734)

ಶ್ರೀ ಹೆಚ್. ಕೆ. ಕುಮಾರಸ್ವಾಮಿ (ಬೇಲೂರು) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು ಪಟ್ಟಣದಲ್ಲಿರುವ 30 ಹಾಸಿಗೆಯ ಸಮುದಾಯ ಆರೋಗ್ಯ ಕೇಂದ್ರವನ್ನು 100 ಹಾಸಿಗೆಗೆ ಹೆಚ್ಚಿಸಲಾಗುವುದೇ?

ಆ) ಪಟ್ಟಣವು ವಿಶ್ವವಿಖ್ಯಾತ ಕೇಂದ್ರವಾಗಿದ್ದು ದಿನಕ್ಕೆ ನೂರಾರು ರೋಗಿಗಳು ಬರುತ್ತಿದ್ದು ವೈದ್ಯರು ಸಾಕಷ್ಟಿಲ್ಲದಿರುವುದು ಗಮನಕ್ಕೆ ಬಂದಿದೆಯೇ?

ಇ) ವೈದ್ಯರನ್ನು ಯಾವಾಗ ತುಂಬಲಾಗುವುದು?

ಈ) ತಾಲ್ಲೂಕಿನಲ್ಲಿ 5 ಹೆಚ್ಚುವರಿ ಆರೋಗ್ಯ ಘಟಕಗಳು ಅವಶ್ಯವಾಗಿದ್ದು ಮಂಜೂರು ಮಾಡಲಾಗುವುದೇ?

ಡಾ. ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಸಧ್ಯಕ್ಕೆ ಇಲ್ಲ.

ಆ) ಹೌದು. ಬೇಲೂರು ಆಸ್ಪತ್ರೆಗೆ 4 ವೈದ್ಯರ ಹುದ್ದೆ ಮಂಜೂರಾಗಿದ್ದು 2 ವೈದ್ಯರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಇ) ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಬಂದಿರುವ ವೈದ್ಯರಿಂದ ಖಾಲಿ ಇರುವ ಸ್ಥಾನಗಳನ್ನು ಭರ್ತಿಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ) ಇಲ್ಲ.

ಶ್ರೀ ಹೆಚ್. ಕೆ. ಕುಮಾರ ಸ್ವಾಮಿ :- ಮಾನ್ಯ ಅಧ್ಯಕ್ಷರೇ, ಬೇಲೂರು ಪಟ್ಟಣದಲ್ಲಿರುವ ಆಸ್ಪತ್ರೆಯಲ್ಲಿನ 30 ಹಾಸಿಗೆಗಳನ್ನು 100 ಹಾಸಿಗೆಗಳಿಗೆ ಹೆಚ್ಚಿಸಲಾಗುವುದೇ ಎಂದು ಪ್ರಶ್ನೆ ಕೇಳಿದರೆ, ಸಧ್ಯಕ್ಕೆ ಅದು ಸಾಧ್ಯವಿಲ್ಲ ಎಂದು ಮಾನ್ಯ ಮಂತ್ರಿಗಳು ಉತ್ತರಿಸಿದ್ದಾರೆ. ಬಹುಶಃ ತಮಗೂ ಗೊತ್ತು, ಎಲ್ಲರಿಗೂ ಗೊತ್ತು, ಬೇಲೂರು ಒಂದು ವಿಶ್ವವಿಖ್ಯಾತ ಸ್ಥಳವಾಗಿದೆ. ಆದರೆ ದುರಾದೃಷ್ಟವಶಾತ್ ಈ ವಿಶ್ವವಿಖ್ಯಾತ ಸ್ಥಳಗಳೇ ಎಲ್ಲಾ ಸ್ಥಳಗಳಿಗಿಂತ ತುಂಬಾ ಉದಾಸೀನಕ್ಕೆ ಒಳಗಾಗಿವೆ ಎಂದರೆ ತಪ್ಪಾಗಲಾರದು. ಮಾನ್ಯ ಅಧ್ಯಕ್ಷರೇ, ಅಲ್ಲಿಗೆ ತಮ್ಮನ್ನು ಮತ್ತು ಮಾನ್ಯ ಸಚಿವರನ್ನು ಒಮ್ಮೆ ಕರೆದು ಕೊಂಡು ಹೋಗುತ್ತೇನೆ, ತಾವು ದಯಮಾಡಿ ಬರಬೇಕು. ಪ್ರತಿ ದಿನ ನೂರಾರು ಜನ ಸ್ಥಳೀಯ ರೋಗಿಗಳು ಆ ಆಸ್ಪತ್ರೆಗೆ ಬರುತ್ತಾರೆ. ಅಲ್ಲದೆ ಅಲ್ಲಿಯ ಸ್ಥಳ ನೋಡಲು ಹೊರಗಡೆಯಿಂದ ಬರುವ ಜನರಿಗೂ ಕೂಡ ಅಲ್ಲಿ ಆಸ್ಪತ್ರೆಯ ಅವಶ್ಯಕತೆ ಇದೆ. ಅಂತಹ ಜಾಗದಲ್ಲಿರುವ 30 ಹಾಸಿಗೆಗಳುಳ್ಳ ಆಸ್ಪತ್ರೆಯನ್ನು 100 ಹಾಸಿಗೆಗಳಿಗೆ ಹೆಚ್ಚಿಗೆ ಮಾಡಿ ಅಂತ ಕೋರಿದರೆ ಮಾನ್ಯ ಮಂತ್ರಿಗಳು ಸದ್ಯಕ್ಕೆ ಬಜೆಟ್ ಇಲ್ಲ ಎನ್ನುತ್ತಾರೆ. ಎರಡನೆಯದಾಗಿ, ಅಲ್ಲಿ ವೈದ್ಯರ ಕೊರತೆ ಇದೆ. ಅಲ್ಲಿ ಪೀಡಿಯಾಟ್ರಿಕ್ಸ್ ಸ್ಪೆಷಲಿಸ್ಟ್ ಒಬ್ಬರೇ ಇದ್ದಾರೆ. ಎಂ.ಬಿ.ಬಿ.ಎಸ್. ಓದಿದವರು ಒಬ್ಬರು ವೈದ್ಯರಿದ್ದಾರೆ. ಇನ್ನು 3 ಜನ, ಗೈನೋಕಾಲಜಿಸ್ಟ್ ಇಲ್ಲ, ಆರ್ಥೋಪಿಡಿಷಿಯನ್ಸ್ ಇಲ್ಲ, ಸರ್ಜನ್ಸ್ ಇಲ್ಲ; ಈ ರೀತಿ ಮೂವರು ಡಾಕ್ಟರ್ಸ್ ಅಲ್ಲಿ ಇಲ್ಲ. ತಾಲ್ಲೂಕಿನಲ್ಲಿ ಪಿ.ಹೆಚ್.ಸಿ. ಮಂಜೂರು ಮಾಡಿ ಎಂದು ನಾವು ಕೇಳುತ್ತಿದ್ದೇವೆ, ಅಲ್ಲಿ ಅದು ಅವಶ್ಯಕತೆ ಇಲ್ಲವೆಂದು ತಾವು ಹೇಳುತ್ತಿದ್ದೀರಿ. ಅದು ಮಲೆನಾಡು ಪ್ರದೇಶ. 10-12 ಕಿ.ಮೀ. ಬರೀ ಆಸ್ಪತ್ರೆಗೆ ನಡೆದುಕೊಂಡು ಬರಬೇಕಾಗಿದೆ. ಅಂತಹ ಸ್ಥಳಗಳಿಗಾದರೂ ತಾವು ಆದ್ಯತೆ ಕೊಟ್ಟು ಇವುಗಳೆಲ್ಲಾ ಅಂಶವನ್ನು ಪರಿಶೀಲಿಸಿ ಪಿ.ಹೆಚ್.ಸಿ. ಮಂಜೂರು ಮಾಡುವಂತೆ ತಮ್ಮಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಡಾ. ಹೆಚ್. ಸಿ. ಮಹದೇವಪ್ಪ :- ಮಾನ್ಯ ಅಧ್ಯಕ್ಷರೇ, ಅಕ್ಷುಯಲ್ಲಾಗಿ ಬೇಲೂರಿನಲ್ಲಿ 30 ಹಾಸಿಗೆ ಆಸ್ಪತ್ರೆ ಅಂತ ಹೇಳಿ ಹಿಂದೆ ಮಂಜೂರಾಗಿದ್ದರೂ ಕೂಡ ಅಲ್ಲಿರತಕ್ಕಂಥದ್ದು ಹತ್ತೇ ಹಾಸಿಗೆ. ಹೀಗೇಕೆ ಎಂದು ಮಾನ್ಯ ಸದಸ್ಯರು ಕೇಳಬಹುದು. ಈ 30 ಹಾಸಿಗೆ ಆಸ್ಪತ್ರೆಯನ್ನು 50 ಹಾಸಿಗೆ ಆಸ್ಪತ್ರೆಯನ್ನಾಗಿ ಪರಿವರ್ತನೆ ಮಾಡಲಿಕ್ಕೆ